ಆ) ವಿಮಾನಯಾನ ಸೌಲಭ್ಯವಿಲ್ಲದೆ ಇರುವುದು ಉತ್ತಮ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದು, ವಿದ್ಯಾರ್ಥಿಗಳಲ್ಲಿ ಮಾತಿನ ಕುಶಲತೆಯ ಕೊರತೆ, ಕೈಗಾರಿಕೋದ್ಯಮಿಗಳು ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ಬಂಡವಾಳ ಹೂಡಲು ಮುಂದೆ ಬಾರದೆ ಇರುವುದು ಇವುಗಳು ಕೆಲವು ಕಾರಣಗಳಾಗಿವೆ.

ಇ) ಮೇಲೆ ತಿಳಿಸಿದ ತೊಂದರೆಗಳನ್ನು ಸರಿಪಡಿಸಲು ಪ್ರಯತ್ನಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಹಾಗೂ ನಿರುದ್ಯೋಗಿ ವಿದ್ಯಾವಂತರಲ್ಲಿ ಮಾತಿನ ಕುಶಲತೆಯ ಅಭಿವೃದ್ಧಿ ಬಿ–ಸ್ಯಾಟ್ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

ಈ) ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅಗತ್ಯ ವಿರುವ ಕೈಗಾರಿಕೆಗಳ ಸ್ಥಾಪನೆಗೆ ಬಂಡವಾಳ ಆಕರ್ಷಣೆಯ ಪ್ರಯತ್ನವನ್ನು ಮುಂದುವರಿಸಲಾಗುತ್ತಿದೆ.

ಉ) ಸರಕಾರದ ಎಲ್ಲಾ ಇಲಾಖೆಗಳಲ್ಲಿ ಇ–ಗವರ್ನೆನ್ಸ್‌ನ್ನು ಅಳವಡಿಸಲು ಕಾಲಮಿತಿ ಕಾರ್ಯಕ್ರಮಗಳನ್ನೊಳಗೊಂಡ ಕಾರ್ಯ ಯೋಜನೆ ಪತ್ರವನ್ನು ಈಗಾಗಲೆ ಸರಕಾರವು ಜಾರಿಗೊಳಿಸಿದೆ. ಇ–ಗವರ್ನೆನ್ಸ್ ಕಾರ್ಯಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಿ.ಆಸು. ಇಲಾಖೆಯಲ್ಲಿ ಪ್ರತ್ಯೇಕ ಕಾರ್ಯದರ್ಶಿಗಳ ಹುದ್ದೆಯನ್ನು ಸೃಷ್ಟಿಸಲಾಗಿದೆ. ಪ್ರತಿ ಇಲಾಖೆಯಲ್ಲಿ ಇ–ಗವರ್ನೆನ್ಸ್ ಕಾರ್ಯಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ದಿಕ್ಕಿನಲ್ಲಿ ಪ್ರತಿ ಇಲಾಖೆಯಲ್ಲಿ ಮುಖ್ಯ ಮಾಹಿತಿ ಅಧಿಕಾರಿಗಳನ್ನು ನೇಮಿಸಿ ಅವರಿಗೆ ತರಬೇತಿ ನೀಡಲಾಗುತ್ತಿದೆ. ಎಲ್ಲಾ ಇಲಾಖೆಗಳ ಇ–ಗವರ್ನೆನ್ಸ್ ಚಟುವಟಿಕೆಗಳನ್ನು ಗಣಕೀಕರಿಸಲು ಪ್ರಯತ್ನಿಸಲಾಗುತ್ತಿದೆ.

ಊ) ಸದ್ಯದಲ್ಲಿ ಅಂತಹ ಪ್ರಸ್ತಾವನೆ ಸರಕಾರದ ಮುಂದೆ ಇರುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ

4342(5087) ಶ್ರೀ ಪಾಟೀಲ್ ಡಿ.ಆರ್. (ಗದಗ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉತ್ತರ ಕರ್ನಾಟಕದ ಪ್ರಮುಖ ಪ್ರವಾಸಿ ಆಕರ್ಷಣಾ ಕೇಂದ್ರಗಳಾಗಿರುವ ಬಿಜಾಪುರ – ಸಂಗಮ – ಬಾದಾಮಿ – ಪಟ್ಟದಕಲ್ಲು – ಲಕ್ಕುಂಡಿ, ಹಂಪೆಗಳನ್ನು ಪ್ರವಾಸಿ ವೃತ್ತವನ್ನಾಗಿ ಅಭಿವೃದ್ಧಿಪಡಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ :

ಆ) ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ಈ ಸ್ಥಳಗಳಲ್ಲಿ ಪ್ರವಾಸಿಗರ ಅನುಕೂಲಕ್ಕೆ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗುವುದು :

ಇ) ಈ ಸ್ಥಳಗಳನ್ನು ಸಂಪರ್ಕಿಸುವ ರಸ್ತೆ ಹಾಗೂ ಇತರ ಮೂಲಭೂತ ಸೌಲಭ್ಯಗಳ ಸೃಷ್ಟಿಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು :

ಈ) ಈ ಭಾಗದಲ್ಲಿ ವಿಮಾನಯಾನ ಸೌಲಭ್ಯ ಕಲ್ಪಿಸಲಾಗುವುದೇ : ಹಾಗಿದ್ದಲ್ಲಿ, ಎಂದಿನಿಂದ ಈ ಸೌಲಭ್ಯ ಲಭ್ಯಗೊಳಿಸಲಾಗುವುದು ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ :

1. ಬಿಜಾಪುರದಲ್ಲಿ ಯಾತ್ರಿ ನಿವಾಸ, ಪ್ರಾದೇಶಿಕ ಪ್ರವಾಸಿ ಕಛೇರಿ, ಹೋಟೆಲ್ ನಿರ್ವಹಣೆ, ಗೋಲಗುಮ್ಮಟಕ್ಕೆ ಹೊನಲು ಬೆಳಕಿನ ವ್ಯವಸ್ಥೆ ತಾಜ್-ಬಾವಡಿ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ.

2. ಬಾದಾಮಿಯಲ್ಲಿ ವಸತಿಗೃಹ, ಚಾಲುಕ್ಯ ಸಂದರ್ಶನ ಕೇಂದ್ರ, ಹೋಟೆಲ್ ನಿರ್ವಹಣೆ, ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ.

3. ಪಟ್ಟದಕಲ್ಲಿನಲ್ಲಿ ಶೌಚಾಲಯನ್ನು ನಿರ್ಮಿಸಲಾಗಿದೆ.

4. ಲಕ್ಕುಂಡಿಯಲ್ಲಿ ಹೆದ್ದಾರಿ ಸೌಲಭ್ಯ, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಾಣ.

5. ಹಂಪಿ ಬಳಿ ಕಮಲಾಪುರದಲ್ಲಿ ಪ್ರವಾಸಿ ಮಾಹಿತಿ ಕೇಂದ್ರ, ಪ್ರವಾಸಿ ಸಂಕೀರ್ಣ ಮತ್ತು ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ; ಮಾರ್ಗಸೂಚಿ ಫಲಕಗಳನ್ನು ಅಳವಡಿಸಲಾಗಿದೆ. 4 ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ.

6. ಇದಲ್ಲದೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ವ್ಯವಸ್ಥಿತ ಪ್ರವಾಸಗಳನ್ನು ಸಹ ಒದಗಿಸಲಾಗಿದೆ.

ಆ) ದೇಶಿಯ ಹಾಗೂ ವಿದೇಶಿ ಪ್ರವಾಸಿಗರಿಗೆ ಸೌಲಭ್ಯವನ್ನು ಕಲ್ಪಿಸಲು ಹಂಪಿ ಸಮಗ್ರ ಅಭಿವೃದ್ಧಿಗಾಗಿ ರೂ. 30.63 ಕೋಟಿಗಳ ಯೋಜನೆಯನ್ನು ತಯಾರಿಸಿ ಕೇಂದ್ರದ ನೆರವು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಇ) ಈ ಸ್ಥಳಗಳಲ್ಲಿ ಈಗಾಗಲೇ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಇನ್ನು ಹೆಚ್ಚಿನ ಸೌಲಭ್ಯಗಳನ್ನು ಅನುದಾನದ ಲಭ್ಯತೆ ಆಧಾರದ ಮೇಲೆ ಒದಗಿಸಲಾಗುವುದು.

ಈ) ಹಂಪಿಗೆ ವಿಮಾನಯಾನ ಸೌಲಭ್ಯ ಕಲ್ಪಿಸಲು ವಿಮಾನ ನಿಲ್ದಾಣಕ್ಕಾಗಿ ಸೂಕ್ತ ಜಮೀನನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ರಾಜ್ಯದ ಮಾನವ ಸಂಪನ್ಮೂಲ ಬೆಳವಣಿಗೆಯ ವರದಿ

4343(5088) ಶ್ರೀ ಪಾಟೀಲ ಡಿ.ಆರ್. (ಗದಗ) : ಮಾನ್ಯ ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ನಾಗರೀಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಮಾನವ ಸಂಪನ್ಮೂಲ ಬೆಳವಣಿಗೆಯ ಎರಡನೇ ವರದಿಯನ್ನು ಯಾವಾಗ ಪ್ರಕಟಿಸಲಾಗುವುದು ;

ಆ) ಮೊದಲ ವರದಿಯ ಪ್ರಕಾರ ಪ್ರತಿಯೊಬ್ಬ ಶಾಸಕರಿಗೂ ಅವರವರ ಕ್ಷೇತ್ರದ ಬೆಳವಣಿಗೆಯ ಅವಕಾಶಗಳ ವಿವರವಾದ ಮಾಹಿತಿ ಪತ್ರ ಕಳುಹಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಆ.ಬಿ. ತಿಮ್ಮಾಪುರ್ (ಯೋಜನೆ, ಸಾಂಖ್ಯಿದ ಹಣಕಾಸು ಮತ್ತು ಸಾಂಖ್ಯಿಕ ಸಚಿವರು):

ಅ) ಈ ವಿಷಯವು ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (UNDP) ಮತ್ತು ಭಾರತ ಸರ್ಕಾರದ ಯೋಜನಾ ಆಯೋಗ ಇವರೊಂದಿಗೆ ಪರಿಶೀಲನೆಯಲ್ಲಿದೆ.

ಆ) ಮೊದಲನೇ ಮಾನವ ಅಭಿವೃದ್ಧಿ ವರದಿ-99 ರಲ್ಲಿ ಒದಗಿಸಿರುವ ಬಹುತೇಕ ಅಭಿವೃದ್ಧಿ ಸೂಚ್ಯಂಕಗಳು ಜಿಲ್ಲಾಧಾರಿತವಾಗಿವೆ. ಪ್ರತಿ ಶಾಸಕರಿಗೆ ಈ ವರದಿಯ ಪ್ರತಿಯನ್ನು ಈಗಾಗಲೇ ಒದಗಿಸಲಾಗಿದೆ.